# ಕರ್ನಾಟಕ ಸರ್ಕಾರ
## ಅರಣ್ಯ ಇಲಾಖೆ
## ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಹಾಗೂ ಆಯ್ಕೆ ಪ್ರಾಧಿಕಾರ ರವರ ಕಚೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-560003

**ಅಧಿಸೂಚನೆ ಸಂಖ್ಯೆ: ಬಿ9-ನೇಮಕಾತಿ-ವಿವ-1/2019-20 ದಿನಾಂಕ: 02-03-2020**
**339 ಅರಣ್ಯ ರಕ್ಷಕ ಹುದ್ದೆಗಳಿಗೆ ನೇರ ನೇಮಕಾತಿ**

## ಪ್ರಕಟಣೆ

339 ಅರಣ್ಯ ರಕ್ಷಕ ಹುದ್ದೆಗಳ ನೇರ ನೇಮಕಾತಿ ಸಂಬಂಧ ದಿನಾಂಕ: 01.06.2022 ರಂದು ಅಧಿಸೂಚನೆಯಲ್ಲಿ ಅಧಿಸೂಚಿಸಿರುವ ಸಂಬಂಧಿಸಿದ ವೃತ್ತಗಳ 36 ಅರಣ್ಯ ರಕ್ಷಕ ಹುದ್ದೆಗಳಿಗೆ ವೃತ್ತವಾರು ಪ್ರತ್ಯೇಕವಾಗಿ 1:1 (ಹುದ್ದೆ:ಅಭ್ಯರ್ಥಿ) 2ನೇ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಮತ್ತು ದಿನಾಂಕ: 06.06.2022 ರಂದು ಕೆನರಾ ವೃತ್ತಕ್ಕೆ ಸಂಬಂಧಿಸಿದಂತೆ ಪರಿಷ್ಕೃತ 1:1 (ಹುದ್ದೆ:ಅಭ್ಯರ್ಥಿ) 2ನೇ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. 2ನೇ ತಾತ್ಕಾಲಿಕ ಆಯ್ಕೆ ಪಟ್ಟಿಗಳಲ್ಲಿನ ಒಟ್ಟು 36 ಅಭ್ಯರ್ಥಿಗಳಿಗೆ ವೈದ್ಯಕೀಯ ಅರ್ಹತಾ ಪರೀಕ್ಷೆ (Medical Fitness Test) ಹಾಗೂ ಮೂಲ ದಾಖಲೆ / ಪ್ರಮಾಣ ಪತ್ರಗಳ ಪರಿಶೀಲನೆಯನ್ನು (Original Documents Verification) ಈ ಕೆಳಕಂಡ ದಿನಾಂಕ ಮತ್ತು ಸ್ಥಳಗಳಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ವಿವರ ಈ ಕೆಳಕಂಡಂತಿದೆ.

| ಕ್ರ. ಸಂ. | ವೃತ್ತ | ಅಭ್ಯರ್ಥಿಗಳ ಸಂಖ್ಯೆ | ಮೂಲ ದಾಖಲೆ / ಪ್ರಮಾಣ ಪತ್ರಗಳ ಪರಿಶೀಲನೆ ದಿನಾಂಕ ಮತ್ತು ಸ್ಥಳ | ವೈದ್ಯಕೀಯ ಅರ್ಹತಾ ಪರೀಕ್ಷೆ ದಿನಾಂಕ ಮತ್ತು ಸ್ಥಳ | 1:1 (ಹುದ್ದೆ:ಅಭ್ಯರ್ಥಿ) 2ನೇ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳ ನೋಂದಣಿ ಸಂಖ್ಯೆ |
|---|---|---|---|---|---|
| 1 | ಬೆಳಗಾವಿ | 6 | ದಿನಾಂಕ: 09.06.2022<br><br>ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬೆಳಗಾವಿ ವಿಭಾಗ | ದಿನಾಂಕ: 09.06.2022<br><br>ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬೆಳಗಾವಿ ವಿಭಾಗ | 1) 2111734<br>2) 2138871<br>3) 2141989<br>4) 2062288<br>5) 2075074<br>6) 2022827 |
| 2 | ಬೆಂಗಳೂರು | 2 | ದಿನಾಂಕ: 10.06.2022<br><br>ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಕೋಲಾರ ವಿಭಾಗ | ದಿನಾಂಕ: 10.06.2022<br><br>ಎಸ್.ಎನ್.ಆರ್. ಜಿಲ್ಲಾ ಆಸ್ಪತ್ರೆ, ಕೊಠಡಿ ಸಂಖ್ಯೆ: 52 ಬಂಗಾರಪೇಟೆ ರಸ್ತೆ, ಕೋಲಾರ | 1) 2122007<br>2) 2064161 |
| 3 | ಚಾಮರಾಜನಗರ | 4 | ದಿನಾಂಕ: 08.06.2022<br><br>ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಚಾಮರಾಜನಗರ | ದಿನಾಂಕ: 09.06.2022<br><br>ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ ಹಾಗೂ ಬೋಧನಾ ಸಂಸ್ಥೆ, ಚಾಮರಾಜನಗರ | 1) 2105731<br>2) 2054908<br>3) 2091387<br>4) 2148520 |
| 4 | ಚಿಕ್ಕಮಗಳೂರು | 1 | ದಿನಾಂಕ: 09.06.2022<br><br>ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಚಿಕ್ಕಮಗಳೂರು | ದಿನಾಂಕ: 09.06.2022<br><br>ಅರಳಗುಪ್ಪೆ ಮಲ್ಲೇಗೌಡ ಜಿಲ್ಲಾ ಆಸ್ಪತ್ರೆ, ಚಿಕ್ಕಮಗಳೂರು | 1) 2149088 |

| ಕ್ರ. ಸಂ. | ವೃತ್ತ | ಅಭ್ಯರ್ಥಿಗಳ ಸಂಖ್ಯೆ | ಮೂಲ ದಾಖಲೆ / ಪ್ರಮಾಣ ಪತ್ರಗಳ ಪರಿಶೀಲನೆ ದಿನಾಂಕ ಮತ್ತು ಸ್ಥಳ | ವೈದ್ಯಕೀಯ ಅರ್ಹತಾ ಪರೀಕ್ಷೆ ದಿನಾಂಕ ಮತ್ತು ಸ್ಥಳ | 1:1 (ಹುದ್ದೆ:ಅಭ್ಯರ್ಥಿ) 2ನೇ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳ ನೋಂದಣಿ ಸಂಖ್ಯೆ |
|---|---|---|---|---|---|
| 5 | ಧಾರವಾಡ | 2 | ದಿನಾಂಕ: 13.06.2022<br><br>ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಧಾರವಾಡ | ದಿನಾಂಕ: 13.06.2022<br><br>ಜಿಲ್ಲಾ ಆಸ್ಪತ್ರೆ, ಧಾರವಾಡ | 1) 2058388<br>2) 2032847 |
| 6 | ಹಾಸನ | 2 | ದಿನಾಂಕ: 09.06.2022<br><br>ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಹಾಸನ | ದಿನಾಂಕ: 09.06.2022<br><br>ಶ್ರೀ ಜಯಚಾಮರಾಜೇಂದ್ರ ಆಸ್ಪತ್ರೆ, ಹಾಸನ | 1) 2057460<br>2) 2039046 |
| 7 | ಕೆನರಾ | 10 | ದಿನಾಂಕ: 09.06.2022<br><br>ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಕಾರವಾರ ವಿಭಾಗ | ದಿನಾಂಕ: 08.06.2022<br><br>ಜಿಲ್ಲಾ ಆಸ್ಪತ್ರೆ, ಕಾರವಾರ ಉತ್ತರ ಕನ್ನಡ ಜಿಲ್ಲೆ | 1) 2027346<br>2) 2077112<br>3) 2013411<br>4) 2137443<br>5) 2017690<br>6) 2140791<br>7) 2106317<br>8) 2137395<br>9) 2050246<br>10) 2163069 |
| 8 | ಮಂಗಳೂರು | 2 | ದಿನಾಂಕ: 09.06.2022<br><br>ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಮಂಗಳೂರು | ದಿನಾಂಕ: 09.06.2022<br><br>ವೆನ್ ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು | 1) 2071981<br>2) 2152122 |
| 9 | ಮೈಸೂರು | 2 | ದಿನಾಂಕ: 09.06.2022<br><br>ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಅರಣ್ಯ ಭವನ, ಅಶೋಕ ಪುರಂ, ಮೈಸೂರು | ದಿನಾಂಕ: 09.06.2022<br><br>ಕೆ. ಆರ್. ಆಸ್ಪತ್ರೆ, ಮೈಸೂರು | 1) 2009019<br>2) 2113176 |
| 10 | ಶಿವಮೊಗ್ಗ | 5 | ದಿನಾಂಕ: 08.06.2022<br><br>ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ ಸರ್ಕಾರಿ ಶ್ರೀಗಂಧ ಸಭಾ ಭವನ, ಶಿವಮೊಗ್ಗ | ದಿನಾಂಕ: 08.06.2022<br><br>ಮೆಗ್ಗಾನ್ ಬೋಧನಾ ಜಿಲ್ಲಾ ಆಸ್ಪತ್ರೆ, ಸಾಗರ ರಸ್ತೆ, ಶಿವಮೊಗ್ಗ | 1) 2053404<br>2) 2053189<br>3) 2095568<br>4) 2055017<br>5) 2075345 |

**ವಿಶೇಷ ಸೂಚನೆ:**

1. ವೈದ್ಯಕೀಯ ಅರ್ಹತೆ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಇತ್ತೀಚಿನ 6 ಭಾವಚಿತ್ರ (Passport Size) ಹಾಗೂ ಸರ್ಕಾರವು ನಿಗಧಿಪಡಿಸಿದ ಮೂಲ ಗುರುತಿನ ಚೀಟಿ (ಚುನಾವಣಾ ಫೋಟೋ ಗುರುತಿನ ಚೀಟಿ / ಆಧಾರ್ ಕಾರ್ಡ್ / ಪಾಸ್‌ಪೋರ್ಟ್ / ಚಾಲನಾ ಪರವಾನಗಿ ಪ್ಯಾನ್ ಕಾರ್ಡ್) ಕಡ್ಡಾಯವಾಗಿ ತರತಕ್ಕದ್ದು ಹಾಗೂ ಅದರ ಜೆರಾಕ್ಸ್ ಪ್ರತಿಯೊಂದಿಗೆ ಮೇಲೆ ತಿಳಿಸಿರುವ ಪರೀಕ್ಷೆ ನಡೆಯುವ ಆಸ್ಪತ್ರೆಗೆ ನಿಗಧಿತ ಸಮಯದೊಳಗೆ ಹಾಜರಾಗಲು ತಿಳಿಸಿದೆ ಮತ್ತು ವೈದ್ಯಕೀಯ ಮಂಡಳಿಯು ನಿಗಧಿಪಡಿಸುವ ವೈದ್ಯಕೀಯ ಪರೀಕ್ಷಾ ಶುಲ್ಕವನ್ನು (ವೈದ್ಯಕೀಯ ಪರೀಕ್ಷಾ ಶುಲ್ಕ, ಕ್ಷ-ಕಿರಣ ಶುಲ್ಕ ಇತ್ಯಾದಿ) ತಮ್ಮ ಸ್ವಂತ ಖರ್ಚಿನಿಂದಲೇ ಭರಿಸತಕ್ಕದ್ದು.

2. ವೈದ್ಯಕೀಯ ಅರ್ಹತೆ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಕಡ್ಡಾಯವಾಗಿ ಕೋವಿಡ್ ಲಸಿಕೆ ಪಡೆದಿರತಕ್ಕದ್ದು ಹಾಗೂ ಕೋವಿಡ್ ಲಸಿಕೆ ಪಡೆದಿರುವ ಸಂಬಂಧ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸತಕ್ಕದ್ದು ಹಾಗೂ ಯಾವುದೇ ಅಭ್ಯರ್ಥಿಯು ಕೆಮ್ಮು, ನೆಗಡಿ ಹಾಗೂ ಜ್ವರದ ಲಕ್ಷಣಗಳು ಇದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ವೈದ್ಯಕೀಯ ಪರೀಕ್ಷೆಯನ್ನು ನಡೆಸಲಾಗುವುದಿಲ್ಲ.

3. ಮೂಲ ದಾಖಲೆ / ಪ್ರಮಾಣ ಪತ್ರಗಳ ಪರಿಶೀಲನೆಗೆ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಸಮಯದಲ್ಲಿ ನಮೂದಿಸಿರುವ ಶೈಕ್ಷಣಿಕ ಅರ್ಹತೆ ದಾಖಲೆ ಹಾಗೂ ಮೀಸಲಾತಿಗೆ ಸಂಬಂಧಿಸಿದ ಪ್ರಮಾಣ ಪತ್ರಗಳ ಮೂಲ ದಾಖಲೆಗಳು ಹಾಗೂ ಸದರಿ ದಾಖಲೆಗಳ ಜೆರಾಕ್ಸ್ ಪ್ರತಿಯನ್ನು ಗೆಜೆಟೆಡ್ ಅಧಿಕಾರಿಯವರಿಂದ ದೃಢೀಕರಿಸಿದ ಪ್ರತಿಯನ್ನು ಮೂಲ ದಾಖಲೆ / ಪ್ರಮಾಣ ಪತ್ರಗಳ ಪರಿಶೀಲನೆ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.

4. ಮೂಲ ದಾಖಲೆ / ಪ್ರಮಾಣ ಪತ್ರಗಳನ್ನು ಹಾಜರುಪಡಿಸಲು ಯಾವುದೇ ಕಾರಣಕ್ಕೂ ಮತ್ತು ಯಾವುದೇ ಸನ್ನಿವೇಶದಲ್ಲಿಯೂ ಕಾಲ ವಿಸ್ತರಣೆ ನೀಡಲಾಗುವುದಿಲ್ಲ.

5. ಅಭ್ಯರ್ಥಿಯು ತನ್ನ ಅರ್ಜಿ ನಮೂನೆಯಲ್ಲಿ ನಮೂದಿಸಿರುವ ಮಾಹಿತಿ / ವಿವರಗಳನ್ನು ನಿಯಮಾನುಸಾರ ಪರಿಗಣಿಸಲಾಗುವುದು. ಮೂಲ ದಾಖಲೆ / ಪ್ರಮಾಣ ಪತ್ರಗಳನ್ನು ಪರಿಶೀಲನೆಯ ಸಮಯದಲ್ಲಿ ಹಾಜರುಪಡಿಸದ ಅಭ್ಯರ್ಥಿಗಳ ಅಭ್ಯರ್ಥಿತನವನ್ನು ರದ್ದುಪಡಿಸಲಾಗುವುದು ಹಾಗೂ ಅವರನ್ನು ಮುಂದಿನ ಆಯ್ಕೆ ಪ್ರಕ್ರಿಯೆಯಿಂದ ಕೈಬಿಡಲಾಗುವುದು.

6. ಅಭ್ಯರ್ಥಿಯು ಮೂಲ ದಾಖಲೆ / ಪ್ರಮಾಣ ಪತ್ರಗಳ ಪರಿಶೀಲನೆಯ ಸಮಯದಲ್ಲಿ ಸರ್ಕಾರವು ನಿಗಧಿಪಡಿಸಿದ ಯಾವುದಾದರೂ ಮೂಲ ಗುರುತಿನ ಚೀಟಿ (ಚುನಾವಣಾ ಫೋಟೋ ಗುರುತಿನ ಚೀಟಿ / ಆಧಾರ್ ಕಾರ್ಡ್ / ಪಾಸ್‌ಪೋರ್ಟ್ / ಚಾಲನಾ ಪರವಾನಗಿ ಪ್ಯಾನ್ ಕಾರ್ಡ್) ಕಡ್ಡಾಯವಾಗಿ ತರತಕ್ಕದ್ದು ಹಾಗೂ ಅದರ ಜೆರಾಕ್ಸ್ ಪ್ರತಿಯೊಂದಿಗೆ ಮೇಲೆ ತಿಳಿಸಿರುವ ಸ್ಥಳಕ್ಕೆ ನಿಗಧಿತ ಸಮಯದೊಳಗೆ ಹಾಜರಾಗಲು ತಿಳಿಸಿದೆ.

7. ಅಭ್ಯರ್ಥಿಗಳು ವೈದ್ಯಕೀಯ ಅರ್ಹತೆ ಪರೀಕ್ಷೆ ಹಾಗೂ ಮೂಲ ದಾಖಲೆ / ಪ್ರಮಾಣ ಪತ್ರಗಳ ಪರಿಶೀಲನೆಗೆ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು. ಅಭ್ಯರ್ಥಿಗಳಿಗೆ ಯಾವುದೇ ರೀತಿಯ ಭತ್ಯೆಗಳನ್ನು ನೀಡಲಾಗುವುದಿಲ್ಲ.

7.6.22

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)

ದಿನಾಂಕ: 07.06.2022
ಸ್ಥಳ: ಬೆಂಗಳೂರು